**3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ, ಹುಬ್ಬಳ್ಳಿ**

**ಸಿ.ಸಿ.ನಂ.41/2025**

ಪಿರ್ಯಾದಿಃ   ಶ್ರೀ ಸಿದ್ದನಗೌಡ ತಂದೆ ಗೌಡಪ್ಪಗೌಡ ಭರಮಗೌಡರ

**ವಿರುದ್ಧ**

ಆರೋಪಿಃ   ಶ್ರೀಮತಿ ಲಕ್ಷ್ಮಿ ತಂದೆ ಗಂಗಾಧರ ನರಗುಂದ

**-ಃ ಅರೋಪಿ ಹೇಳಿಕೆ 313 ದಂಡ ಪ್ರಕ್ರಿಯ ಅನ್ವಯ ಃ-**

**ಪ್ರಶ್ನೆ.1ಃ ಪಿಡಬ್ಲ್ಯೂ-1** ಶ್ರೀ ಸಿದ್ದನಗೌಡ ತಂದೆ ಗೌಡಪ್ಪಗೌಡ ಭರಮಗೌಡರ ತಮ್ಮ ಮುಖ್ಯ ವಿಚಾರಣೆಯಲ್ಲಿ, ಪಿರ್ಯಾದಿದಾರರು ಮತ್ತು ಆರೋಪಿತರಾದ ನೀವು ಒಬ್ಬರಿಗೊಬ್ಬರು ಪರಿಚಯಸ್ತರು ಇದ್ದು, ನೀವು ಪಿರ್ಯಾದಿದಾರರ ಕಡೆಯಿಂದ ದಿನಾಂಕಃ 15.03.2023 ರಂದು ರೂ.1,00,000/- ಗಳ ಕೈಗಡ ಸಾಲವನ್ನು ಪಡೆದುಕೊಂಡಿದ್ದು **ಇದೆ** ಎಂದು ಹೇಳಿರುತ್ತಾರೆ ಈ ಬಗ್ಗೆ ನೀವು ಏನು ಹೇಳುತ್ತೀರಾ?

**ಉತ್ತರಃ-**

**ಪ್ರಶ್ನೆ.2ಃ** ಪಿ.ಡಬ್ಲ್ಯು-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಸದರೀ ಸಾಲಕ್ಕೆ ಆರೋಪಿಯಾದ ನೀವು ಜಾಮೀನುದಾರರಾಗಿರುತ್ತೀರಿ. ಸದರೀ ಸಾಲದ ಮರುಪಾವತಿಯ ಜವಾಬ್ದಾರಿ ನಿಮ್ಮ ಮೇಲೆ ಇರುತ್ತದೆ. ಸಾಲದ ಹಣವನ್ನು ಮರುಪಾವತಿಸುವಂತೆ ಫಿರ್ಯಾದಿದಾರರು ಕೇಳಿಕೊಂಡಾಗ ಆರೋಪಿಯಾದ ನೀವು ಸಾಲದ ಮರುಪಾವತಿಗಾಗಿ ಸ್ಟೇಟ ಬ್ಯಾಂಕ ಆಫ್ ಇಂಡಿಯಾ ನವನಗರ ಬ್ರಾಂಚಿನ ಚೆಕ್ಕ ನಂ.808356 ರೂ.1,00,000/- ದಿಃ14.06.2024 ಎಂದು ನಮೂದಿಸಿ ಫಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ. ಸದರಿ ಚೆಕ್ಕನ್ನು ನಗದಿಕರಣಕ್ಕೆ ಫಿರ್ಯಾದಿದಾರರು ತಮ್ಮ ಬ್ಯಾಂಕ ಆದ ಕರ್ನಾಟಕ ಬ್ಯಾಂಕ , ನವನಗರ ಬ್ರಾಂಚಿಗೆ ಸಲ್ಲಿಸಿದಾಗ ಸದರಿ ಚೆಕ್ಕು ನಗದಿಕರಣವಾಗದೆ “**Funds insufficient**” ಎಂಬ ಶರಾದೊಂದಿಗೆ ದಿಃ15.03.2024 ರಂದು ಹಿಂದಿರುಗಿಸಲಾಗಿದೆ ಎಂದು ಹೇಳಿರುತ್ತಾರೆ ಈ ಬಗ್ಗೆ ನೀವು ಏನು ಹೇಳುತ್ತೀರಾ?

**ಉತ್ತರಃ-**

**ಪ್ರಶ್ನೆ.3ಃ** ಪಿ.ಡಬ್ಲ್ಯು-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಈ ಬಗ್ಗೆ ಆರೋಪಿತರಾದ ನಿಮಗೆ ದಿಃ 16.07.2024 ರಂದು ನೋಟಿಸು ನೀಡಿದ್ದು,

ಸದರಿ ನೋಟಿಸನ್ನು ಆರೋಪಿತರಾದ ನೀವು ಸ್ವೀಕರಿಸಿದ್ದು ಅದಕ್ಕೆ ಯಾವುದೇ ಮರುತ್ತರವನ್ನು ನೀಡಿರುವುದಿಲ್ಲ ಹಾಗೂ ಸದರಿ ಚೆಕ್ಕಿನ ಮೊತ್ತವನ್ನು ಮರುಪಾವತಿಸಿರುವುದಿಲ್ಲ ಎಂದು ಹೇಳಿರುತ್ತಾರೆ ಈ ಬಗ್ಗೆ ನೀವು ಏನು ಹೇಳುತ್ತೀರಾ**?**

**ಉತ್ತರಃ-**

**ಪ್ರಶ್ನೆ.4ಃ ನಿಮಗೆ** ಈ ಕೇಸಿನ ಬಗ್ಗೆ ಏನನ್ನಾದರು **ಹೇಳಲು ಇದೆಯೇ ?**
**ಉತ್ತರಃ**

**ಪ್ರಶ್ನೆ.5ಃ ನಿಮ್ಮ ಪರ ಯಾರಾದರೂ ಸಾಕ್ಷಿದಾರರು ಇದ್ದಾರೆಯೇ ?**
**ಉತ್ತರಃ**

**(ಈ ಮೇಲಿನ ಸಾಕ್ಷಿದಾರರ ಹೇಳಿಕೆಗಳನ್ನು ಅರೋಪಿಗೆ ನನ್ನ ಸಮಕ್ಷಮ ಓದಿ ಹೇಳಲಾಯಿತು ಹಾಗೂ ಈ ದಾಖಲೆಯು ಅರೋಪಿ ನೀಡಿದ ಉತ್ತರಗಳನ್ನು ಒಳಗೊಂಡಿದೆ ಎಂದು ದೃಢೀಕರಿಸಿದೆ)**

ದಿನಾಂಕ 05.07.2025
ಸ್ಥಳ ಃ ಹುಬ್ಬಳ್ಳಿ.

3 ನೇ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹುಬ್ಬಳ್ಳಿ.